# ಮರೆಯುವುದುಂಟೇ ಶಾಲಾ ನೆನಪುಗಳನ್ನು..!

ಮೊನ್ನೆ ಶಿಕ್ಷಕರ ದಿನಾಚರಣೆಯಂದು ನನ್ನ ಹಳೆಯ ಅಟ್ಲಾಸನ್ನು ಬಿಡಿಸಿದಾಗ ಐವತ್ತು ವರ್ಷಗಳ ಹಿಂದೆ ನಾನು ಕಲಿತಿದ್ದ ಬೆಳ್ಮಣ್ಣು ಬೋರ್ಡ್ ಹೈಸ್ಕೂಲಿನ ನಮ್ಮ ಒಂದು ಗ್ರೂಪ್ ಫೋಟೊ ಸಿಕ್ಕಿತು. ನಮ್ಮ ಎಸ್ಸೆಸ್ಸೆಲ್ಸಿಯ ಬೀಳ್ಕೊಡುವ ಸಮಾರಂಭದ ಕೊನೆಗೆ ತೆಗೆದ ಚಿತ್ರ ಅದು.

■ ಬಿ.ಸೀತಾರಾಮ ಭಟ್ ಬೆಳ್ಮಣ್ಣು

ಬಾಲ್ಯ, ಶಾಲೆ, ಮನೆ, ಅಜ್ಜ ಅಜ್ಜಿ ಮನೆಯ ಒಡನಾಟ, ಬೇಸಿಗೆ ರಜಾದಲ್ಲಿ ಆಟ ಆಡಿದ ನೆನಪು.. ಎಲ್ಲ ನೆನಪುಗಳನ್ನೂ ದೊಡ್ಡವರಾದ ಮೇಲೆ ಮೆಲುಕು ಹಾಕಿ ಸಂತೋಷಪಡುವುದು ನಿಜಕ್ಕೂ ಆಪ್ಯಾಯಮಾನ. ಇದರಲ್ಲೂ ಶಾಲಾ ದಿನಗಳ ನೆನಪುಗಳಂತೂ ಜೀವಮಾನದುದ್ದಕ್ಕೂ ನೆನಪುಗಳ ದೊಡ್ಡ ಬುತ್ತಿಯೇ ಸರಿ.

ಅಂದ ಹಾಗೆ, ಮೊನ್ನೆ ಶಿಕ್ಷಕರ ದಿನಾಚರಣೆಯಂದು ನನ್ನ ಹಳೆಯ ಅಟ್ಲಾಸನ್ನು ಬಿಡಿಸಿದಾಗ ಐವತ್ತು ವರ್ಷಗಳ ಹಿಂದೆ ನಾನು ಕಲಿತಿದ್ದ ಬೆಳ್ಮಣ್ಣು ಬೋರ್ಡ್ ಹೈಸ್ಕೂಲಿನ ನಮ್ಮ ಒಂದು ಗ್ರೂಪ್ ಫೋಟೊ ಸಿಕ್ಕಿತು. ನಮ್ಮ ಎಸ್ಸೆಸ್ಸೆಲ್ಸಿಯ ಬೀಳ್ಕೊಡುವ ಸಮಾರಂಭದ ಕೊನೆಗೆ ತೆಗೆದ ಚಿತ್ರ ಅದು. ಸುಮಾರು 70 ವಿದ್ಯಾರ್ಥಿಗಳು ಮತ್ತು 12 ಅಧ್ಯಾಪಕರು ಹಾಗೂ ಇತರ ಸಿಬ್ಬಂದಿಗಳಿದ್ದ ಫೋಟೋವದು! ಅರ್ಧ ಶತಮಾನದ ಹಿಂದಿನ ನನ್ನ ಶಾಲೆಯ ನೆನಪು ಮುತ್ತಿಕೊಂಡು ಬಂತು. ಆಗ ಕಾರ್ಕಳ ತಾಲೂಕಿನಲ್ಲಿ ಬಹಳ ಪ್ರಸಿದ್ಧವಾಗಿದ್ದ ಶಾಲೆ ನಮ್ಮದು.

ಸುತ್ತಮುತ್ತಲಿನ ನಂದಳಿಕೆ, ಕೆದಿಂಜೆ, ಬೋಳ, ನಿಟ್ಟೆ, ಕಾಂತಾವರ, ಸೂಡಾ, ಸಾಂತೂರ್ ಕೊಪ್ಪಲ ಮುಂತಾದ ಹಳ್ಳಿಗಳಿಂದ ಹತ್ತಾರು ಮೈಲು ನಡೆದು ಕೊಂಡು ಆಗ ಬೆಳ್ಮಣ್ಣು ಹೈಸ್ಕೂಲಿಗೆ ವಿದ್ಯಾರ್ಥಿಗಳು ಬರುತ್ತಿದ್ದರು. ಈ ಚಿತ್ರದ ಹೆಚ್ಚಿನ ಗೆಳೆಯರ ಹೆಸರುಗಳು ನೆನಪಾಗುತ್ತಿದೆ. ನಿಂತವರಲ್ಲಿ ಎರಡನೇ ಸಾಲಿನ ನಾಲ್ಕನೆಯ ಹುಡುಗ ಸುಬ್ರಮಣ್ಯ ಈಗ ದೆಹಲಿಯಲ್ಲಿ ಏಷ್ಯಾದಲ್ಲೇ ಪ್ರಖ್ಯಾತವಾದ ಮುದ್ರಣಾಲಯದ ಒಡೆಯ. ರಮೇಶ, ಶಶಿಧರ, ಬ್ಯಾಂಕ್, ಜೀವವಿಮಾ ನಿಗಮದಲ್ಲಿ ಉದ್ಯೋಗ ಮಾಡಿ ಈಗ ವಿಶ್ರಮಿಸಿದ್ದಾರೆ. ಇನ್ನೂ ಅನೇಕರು ವಿದೇಶಗಳಲ್ಲಿದ್ದಾರೆ. ಆಗಿನ ಹುಡುಗಿಯರು ಹಾಫ್ ಸಾರಿ ಅಥವಾ ಸೀರೆ ಉಟ್ಟುಕೊಂಡು ಸಮಾರಂಭಕ್ಕೆ ಬರುತ್ತಿದ್ದರು !

ಕೆಳಗಿನ ಸಾಲಿನ ಪ್ರತಿ ಶಿಕ್ಷಕರ ಹೆಸರು ನೆನಪಿದೆ. ನಮ್ಮನ್ನು ತಿದ್ದಿ ತೀಡಿ ರೂಪಿಸಿದವರು. ಕನ್ನಡ ಪಂಡಿತರು, ಲೆಕ್ಕದ ತಂತ್ರಿ ಮಾಸ್ಟ್ರು, ಸಮಾಜದ ದಿನೇಶ ರಾಯರು, ಇಂಗ್ಲಿಷ್ ನ ಲಕ್ಷ್ಮಣ ಶೆಟ್ರು, ಹೆಡ್ಮಾಸ್ತರ್ ರಾಮ ಭಟ್ರು, ಡ್ರಾಯಿಂಗ್ ಮಾಸ್ಟ್ರು, ಹಿಂದಿ ಪಂಡಿತ ಸೀತಾರಾಮ ಶೆಟ್ರು, ಲೆಕ್ಕದ ಮುಗೇರಾಯರು, ಸೋದರರಾದ ರಾಜೀವ್‌ರಮಾನಂದರು, ವಿಜ್ಞಾನದ ಜಯಂತ ರಾಯರು, ಡ್ರಿಲ್ ಮಾಷ್ಟು ಎಂದೇ ಪ್ರಸಿದ್ಧರಾಗಿದ್ದ ಶಿಸ್ತಿನ ಸಿರಿಲ್ ಗೊನ್ಸಾಲ್ವಿಸ್ ರವರು... ಇವರೆಲ್ಲರಿಂದ ನಮ್ಮ ಶಾಲೆ ಒಂದು ಅದ್ಭುತ ಸಂಗಮವಾಗಿತ್ತು!

ಚೀನಾ ಪಾಕಿಸ್ತಾನಗಳು ದಾಳಿ ನಡೆಸಿದ್ದಾಗ ಊರವರು, ಶಿಕ್ಷಕರು ಒಟ್ಟಾಗಿ ನಮ್ಮ ಮೈದಾನದಲ್ಲಿ ಸಭೆ ನಡೆಸಿದಾಗ ನಾವು ಚೀನಾ ಪಾಕಿಸ್ತಾನಗಳಿಗೆ ಧಿಕ್ಕಾರ ಕೂಗಿದ್ದು... ಊರವರು ತಮ್ಮ ಹಣ ಆಭರಣಗಳನ್ನು ದೇಶಕ್ಕಾಗಿ ನೀಡಿದ್ದು.. ಆಗಿನ ನಮ್ಮ ಯಕ್ಷಗಾನ, ಈಗಿನಂತೆ ಹಿನ್ನೆಲೆಯಲ್ಲಿ ಸಿನಿಮಾ ಸಂಗೀತ ಹಾಕಿ ಹುಚ್ಚು ಹಿಡಿದಂತೆ ನರ್ತಿಸದೆ ಮನಸ್ಸಿಗೆ ಹಿತವಾಗುವಂತೆ ಕಾರ್ಯಕ್ರಮ ನೀಡುತ್ತಿದ್ದ ವಾರ್ಷಿಕೋತ್ಸವಗಳು.. ಇವೆಲ್ಲ ಮತ್ತೆ ನೆನಪಾದವು!

ಭಾವನೆಗಳು ಯಾವತ್ತೂ ಮಧುರ. ನೆನಪುಗಳು ಎಂದಿಗೂ ಅಮರ..! ■

